

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಸಂಧ್ಯಾವಂದನೆ ಮಾಡಬೇಕೆ, ನಮಾಜು ಮಾಡಬೇಕೆ?....

– "Why do you hate Indians?"
– "No Sir, we do not hate Indians."
– "ದಿಲ್ ಸೇ ಬೋಲೋ, ದಿಮಾಗ್ ಸೇ ನಹೀಂ!"
– "ಮೈಂ ದಿಲ್ ಸೇ ಹೀ ಬೋಲ್‌ರಹಾ ಹೂಂ, ಸಾಬ್. Believe me, we do not hate Indians. But we do hate Indian politicians and the politicians of our country as well!" (ನನ್ನನ್ನು ನಂಬಿ, ನಾವು ದ್ವೇಷ ಮಾಡುವುದು ಭಾರತೀಯರನ್ನಲ್ಲ; ಭಾರತದ ರಾಜಕಾರಣಿಗಳನ್ನು ಮತ್ತು ನಮ್ಮ ದೇಶದ ರಾಜಕಾರಣಿಗಳನ್ನು!)

ಈ ಉತ್ತರ ಕೊಟ್ಟವರು ಮತ್ತಾರೂ ಅಲ್ಲ; ದುಬೈನಲ್ಲಿ ವಾಸವಾಗಿರುವ ಒಬ್ಬ ಪಾಕಿಸ್ತಾನದ ಟ್ಯಾಕ್ಸಿ ಡ್ರೈವರ್! ಪ್ರಶ್ನೆ ಹಾಕಿದವರು ದುಬೈನಲ್ಲಿ ವಾಸವಾಗಿರುವ ನಮ್ಮ ಮಠದ ಶಿಷ್ಯರಾದ ಡಾ॥ ಸುಭಾಷ್ ಪಾಟೀಲ್. ಈ ಲೇಖನವನ್ನು ಬರೆಯುತ್ತಿರುವುದಾದರೂ ಅಲ್ಲಿಂದಲೇ. ಆ ಡ್ರೈವರನ ಮಾತುಗಳನ್ನು ಕೇಳಿ ನಮ್ಮಂತೆ ನಿಮಗೂ ಆಶ್ಚರ್ಯವಾಗಿರಬಹುದು. ಇದು ಪಾಕಿಸ್ತಾನದ ಒಬ್ಬ ಡ್ರೈವರ್ ಮಾತಲ್ಲ. ಆ ದೇಶದ ಬಹುತೇಕ ಶ್ರೀಸಾಮಾನ್ಯರ ಹೃದಯದ ಮಾತು ಎಂದು ಇಲ್ಲಿ ವಿವಿಧ ಕಂಪನಿಗಳಲ್ಲಿ ಪಾಕಿಸ್ತಾನಮೂಲದ ಸಹೋದ್ಯೋಗಿಗಳೊಂದಿಗೆ ದಿನನಿತ್ಯ ಕೆಲಸಮಾಡುತ್ತಿರುವ ಅನೇಕ ಭಾರತೀಯರ ಅಭಿಪ್ರಾಯ. ಇಲ್ಲಿ ವಾಸವಾಗಿರುವ ಭಾರತೀಯರು ಮತ್ತು ಪಾಕಿಸ್ತಾನದವರು ಸ್ಥಳೀಯ ಮುಸ್ಲಿಮರಿಗಿಂತ ವಿಭಿನ್ನವಾದ ಸಮಾನ ಸಾಂಸ್ಕೃತಿಕ ನೆಲಗಟ್ಟನ್ನು ಹೊಂದಿದವರಾಗಿದ್ದಾರೆ. ಆ ಡ್ರೈವರ್ ಮುಂದುವರಿದು ಹೇಳಿದ ಮತ್ತೊಂದು ಸಂಗತಿಯೆಂದರೆ 'ಅಗರ್ ಇಂಡಿಯಾ ಔರ್ ಪಾಕಿಸ್ತಾನ್ ಏಕ್ ಹೋ ಜಾಯ್ ತೋ ದುನಿಯಾ ಕೀ ಕೋಯೀ ಭೀ ತಾಕತ್ ಹಮೇಂ ಕುಛ್ ನಹೀಂ ಕರ್ ಸಕತೀ ಹೈಂ" (ಭಾರತ ಮತ್ತು ಪಾಕಿಸ್ತಾನ ಒಂದು ದೇಶವಾದರೆ ಪ್ರಪಂಚದ ಯಾವ ಶಕ್ತಿಯೂ ನಮ್ಮನ್ನು ಏನೂ ಮಾಡಲು ಸಾಧ್ಯವಿಲ್ಲ). ಪಠಾಣ್ ಪ್ರದೇಶದ ಮತ್ತೊಬ್ಬ ಪಾಕಿಸ್ತಾನಿ ಹೇಳಿದ ಇನ್ನೊಂದು ಆಶ್ಚರ್ಯಕರವಾದ ಮಾತೆಂದರೆ "Pakistan never existed as a country before. It was made by the British to divide us and it must be dissolved!"

ಈ ಮಾತುಗಳನ್ನು ಕೇಳಿದಾಗ ನಮಗೆ ನೆನಪಾಗಿದ್ದು ಭಾರತದ ದೂರದರ್ಶನದಲ್ಲಿ ದಿನನಿತ್ಯ ಬರುವ ಒಂದು ಮೊಬೈಲ್ ಫೋನ್ ಜಾಹೀರಾತು. ಸಾಮಾನ್ಯವಾಗಿ ಇಂತಹ ಜಾಹಿರಾತುಗಳ ಬಗ್ಗೆ ಯಾರೂ ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ, ನೋಡಿ ವಿಚಾರಮಾಡುವುದಿಲ್ಲ ಮತ್ತು ಆನಂದಿಸುವುದಿಲ್ಲ. ನಿಮಗೂ ಅದನ್ನು ನೋಡಿದ ನೆನಪಿರಬಹುದು: ಇಬ್ಬರು ಮುದ್ದಾದ ಬಾಲಕರು ಚೆಂಡಾಟವಾಡಲು ಉತ್ಸುಕರಾಗಿದ್ದಾರೆ. ಆದರೆ ಅವರ ಮಧ್ಯೆ ಮುಳ್ಳುತಂತಿಯ ಬೇಲಿ ಅಡ್ಡಬಂದಿರುತ್ತದೆ. ಅದನ್ನೇ ಅವರು ಆಟದ ಬಲೆಯನ್ನಾಗಿ ಮಾಡಿಕೊಳ್ಳುತ್ತಾರೆ. ತಂತಿಬೇಲಿಯ ಒಂದು ಕಡೆ ಇರುವ ಹುಡುಗ ಚೆಂಡನ್ನು ಒದೆಯುತ್ತಾನೆ. ಅದು ಮೇಲಕ್ಕೆ ಪುಟಿದು ತಂತಿಬೇಲಿಯ ಆಚೆ ಕಡೆ ಹೋಗಿ ಬೀಳುತ್ತದೆ. ಆಚೆ ಬದಿಯಲ್ಲಿರುವ ಹುಡುಗ ಓಡಿ ಹೋಗಿ ಚೆಂಡನ್ನು ಹಿಡಿದುಕೊಂಡು ಈಚೆ ಬದಿಯಲ್ಲಿರುವ ಹುಡುಗನನ್ನು ಕೈಬೀಸಿ ಕರೆಯುತ್ತಾನೆ. ಚೆಂಡನ್ನು ಆಡಿದ ಹುಡುಗ ಹಿಂಜರಿಯುತ್ತಾನೆ. ಆದರೆ ಆಚೆಬದಿಯ ಹುಡುಗನ ಒತ್ತಾಯಕ್ಕೆ ಮಣಿದು ಕಷ್ಟಪಟ್ಟು ತಂತಿಬೇಲಿಯಲ್ಲಿ ನುಸುಳಿ ಆಚೆಕಡೆ ಹೋಗಲು ಪ್ರಯತ್ನಿಸುತ್ತಾನೆ. ಮುಳ್ಳಿನ ತಂತಿಯಲ್ಲಿ ಸಿಕ್ಕಿಕೊಳ್ಳದಂತೆ ಇವನಿಗೆ ಆ ಹುಡುಗ ನೆರವಾಗುತ್ತಾನೆ!.... ತುಂಬಾ ಹೃದಯಂಗಮವಾಗಿ ಚಿತ್ರೀಕರಿಸಿರುವ ಈ ದೃಶ್ಯವನ್ನು ನೋಡಿದಾಗ ತಟ್ಟನೆ ನಮ್ಮ ಕಣ್ಮುಂದೆ ಅದು ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಇರುವ ಗಡಿರೇಖೆಯ ತಂತಿಬೇಲಿಯಾಗಿ ಕಾಣಿಸಿತು. ನಿಮಗೂ ಹಾಗೆ ಅನ್ನಿಸಿರಲು ಸಾಕು. ಮಕ್ಕಳ ಮನಸ್ಸು ಎಷ್ಟೊಂದು ಮುಗ್ಧ! ಪ್ರಾಯಶಃ ಆ ಮಕ್ಕಳು ಎರಡೂ ದೇಶಗಳ ಗಡಿಸಂರಕ್ಷಣಾಸೇನೆಗಳ ಮಕ್ಕಳಿರಬಹುದು. ಆದರೆ ಯಾವ ಶತ್ರುತ್ವದ ದುರ್ಭಾವನೆಗಳೂ ಆ ಎಳೆಯ ಮನಸ್ಸುಗಳಲ್ಲಿಲ್ಲ! ಮೇಲ್ನೋಟಕ್ಕೆ ಇದು ಮೊಬೈಲ್ ಫೋನಿನಲ್ಲಿ ಮಾತನಾಡಲು ಯಾವ ಗಡಿರೇಖೆಗಳೂ ಅಡ್ಡಬರುವುದಿಲ್ಲವೆಂದು ಸೂಚಿಸುವ ಜಾಹಿರಾತಾಗಿದ್ದರೂ ಎರಡು ದೇಶಗಳ ಜನರು ಆ ಮಕ್ಕಳಂತೆ ಐಕ್ಯಮತ್ಯದಿಂದ ಬಾಳಬೇಕೆಂಬ ಮಾನವೀಯ ಸಂದೇಶವನ್ನೂ ಹೊಂದಿದೆ.

ದುಬೈ ನಗರ ಸಂಯುಕ್ತ ಅರಬ್ ರಾಷ್ಟ್ರದ (UAE) ಒಂದು ಭಾಗವಾಗಿದ್ದು ಪರ್ಷಿಯನ್ ಕೊಲ್ಲಿಯ ದಕ್ಷಿಣತೀರದಲ್ಲಿದೆ. ಕೊಲ್ಲಿರಾಷ್ಟ್ರಗಳಲ್ಲಿಯೇ ಅತ್ಯಂತ ದಟ್ಟವಾದ ಜನಸಂಖ್ಯೆಯುಳ್ಳ ನಗರ. ರಸ್ತೆಗಳಲ್ಲಿ ಹೋದರೆ ಇಕ್ಕೆಲಗಳಲ್ಲಿ ಒಂದಕ್ಕೊಂದು ಸ್ಪರ್ಧಿಸುವಂತೆ ತಲೆ ಎತ್ತಿ ನಿಂತಿರುವ ನೂರಾರು ಗಗನಚುಂಬಿ ಸೌಧಗಳು (sky scrapers). ಇಲ್ಲಿಯ ಆದಾಯದ ಮೂಲ ಪ್ರವಾಸೋದ್ಯಮ, ವಾಣಿಜ್ಯ ಮತ್ತು ರಿಯಲ್ ಎಸ್ಟೇಟ್. ನೂರಕ್ಕೆ ನೂರು ಮರಳುಗಾಡಿನ ದೇಶವಾಗಿರುವುದರಿಂದ ಇಲ್ಲಿ ಕೃಷಿ ಇಲ್ಲವೇ ಇಲ್ಲ ಎಂದರೂ ತಪ್ಪಿಲ್ಲ. ಆದರೂ ಹೊರಗಿನಿಂದ ಮಣ್ಣನ್ನು ತಂದು ಮರುಭೂಮಿಯನ್ನು ಹಸಿರಿನ ನಾಡನ್ನಾಗಿ ಮಾಡುವ ಭಗೀರಥ ಪ್ರಯತ್ನ ಇಲ್ಲಿ ನಡೆದಿದೆ. ಮರುಭೂಮಿಯ ನಿವಾಸಿಗಳಾದ ಇವರಿಗೆ ವಿದ್ಯುಚ್ಛಕ್ತಿ ಬಿಲ್‌ಗಿಂತ ನಲ್ಲಿ ನೀರಿನ ಬಿಲ್ ಜಾಸ್ತಿ ಬರುತ್ತದೆ. ಈ ದೇಶಕ್ಕೆ 150 ವರ್ಷಗಳಿಗಿಂತ ಹೆಚ್ಚಿನ ಇತಿಹಾಸವಿಲ್ಲ. ಕಳೆದ 40 ವರ್ಷಗಳಿಂದ ಈ ನಗರ ಮಾಡಿದ ಸಾಧನೆ ಜಗತ್ತನ್ನೇ ಇತ್ತ ಕೈಬೀಸಿ ಕರೆಯುತ್ತಿದೆ. ಇಲ್ಲಿಯ ನಿವಾಸಿಗಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯವರು ಭಾರತೀಯರು.

ಬೆಂಗಳೂರಿನಿಂದ ದುಬೈಗೆ ಸುಮಾರು ಮೂರುಮುಕ್ಕಾಲು ಗಂಟೆಗಳ ಪ್ರಯಾಣ. ಎಮಿರೇಟ್ಸ್ ವಿಮಾನ ಹತ್ತಿ ಕುಳಿತ ಕೆಲವೇ ನಿಮಿಷಗಳಲ್ಲಿ ಆ ಲೋಹದ ಹಕ್ಕಿ ಆಕಾಶಕ್ಕೆ ಜಿಗಿಯಿತು. ಸ್ವಲ್ಪಹೊತ್ತಿನಲ್ಲಿಯೇ ಗಗನಸಖಿ ನಮ್ಮ ಹತ್ತಿರ ಬಂದು ಸೌಜನ್ಯದಿಂದ ಮಾತನಾಡಿಸಿ ಒಂದು ಕರಪತ್ರವನ್ನು (brochure) ಕೊಟ್ಟಳು. ಅದು ಅಂದಿನ ವಿಮಾನಯಾನದಲ್ಲಿ ಉಣಬಡಿಸಲಿರುವ ಭಕ್ಷ್ಯಭೋಜ್ಯಗಳ menu. ಅದರ ಅವಶ್ಯಕತೆ ನಮಗಿಲ್ಲವೆಂದು ಹೇಳಿಕಳುಹಿಸಿ ಕುತೂಹಲದಿಂದ ಕರಪತ್ರದ ಮೇಲೆ ಕಣ್ಣಾಡಿಸಿದೆವು. ಅದು ಮೂರು ಭಾಷೆಗಳಲ್ಲಿ ಮುದ್ರಿತವಾಗಿತ್ತು. ಇಂಗ್ಲೀಷ್ ಮತ್ತು ಅರಾಬಿಕ್ ಭಾಷೆಗಳ ಜೊತೆಗೆ ಕನ್ನಡದಲ್ಲಿಯೂ ಮುದ್ರಿತವಾಗಿದ್ದನ್ನು ಕಂಡು ನಮಗೆ ಆಶ್ಚರ್ಯ ಉಂಟಾಯಿತು: "ಎಮಿರೇಟ್ಸ್ ನಿಮ್ಮನ್ನು ಸ್ವಾಗತಿಸುತ್ತದೆ. ಈ ವಿಮಾನದಲ್ಲಿ ನಿಮ್ಮ ಆಯ್ಕೆಗಳು ಲಭ್ಯವಿಲ್ಲದಿದ್ದಲ್ಲಿ ನಾವು ಅದಕ್ಕಾಗಿ ನಿಮ್ಮ ಕ್ಷಮೆ ಕೋರುತ್ತೇವೆ." ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮುಖ್ಯಮಂತ್ರಿ ಚಂದ್ರು ಈ ರೀತಿ ಮುದ್ರಿಸಬೇಕೆಂದು ಎಮಿರೇಟ್ಸ್ ವಿಮಾನಸಂಸ್ಥೆಗೆ ನೋಟೀಸ್ ಕೊಟ್ಟಿರಲಾರರು! ಅದನ್ನು ಓದಿದ ಮೇಲೆ ಈ ಕರಪತ್ರವನ್ನು Executive Class ನಲ್ಲಿ ಪ್ರಯಾಣ ಮಾಡುವವರಿಗೆ ಕೊಡುವುದಕ್ಕಿಂತ Economy Class ನಲ್ಲಿ ಪ್ರಯಾಣ ಮಾಡುವವರಿಗೆ ಕೊಡುವುದು ಒಳ್ಳೆಯದು ಎಂದು ಗಗನಸಖಿಗೆ ಹೇಳಬೇಕೆನಿಸಿತು. ಏಕೆಂದರೆ ಕನ್ನಡನಾಡಿನಲ್ಲಿರುವ ಬಹಳಷ್ಟು ಜನ Executives ಗಳಿಗೆ ಕನ್ನಡ ಓದಲು ಬರುವುದಿಲ್ಲವೆಂಬ ಸಂಗತಿಯು ಆ ಗಗನಸಖಿಗೆ ಗೊತ್ತಿದ್ದಂತೆ ಕಾಣುವುದಿಲ್ಲ. ಹಾಗೆ ಹೇಳಿದರೆ ಮರ್ಯಾದೆ ಹೋಗುವುದು ನಮ್ಮ ನಾಡಿನದು. ಕನ್ನಡಿಗರಿಗೆ ತಮ್ಮ ಭಾಷೆಯ ಬಗ್ಗೆ ಇರುವಷ್ಟು ಅವಜ್ಞೆ ಜಗತ್ತಿನ ಯಾವ ದೇಶದ ಜನರಲ್ಲಿಯೂ ಇರಲಾರದು. ಕಾನ್ವೆಂಟ್ ಶಾಲೆಗೆ ಮಕ್ಕಳನ್ನು ಸೇರಿಸಿದ ಎಷ್ಟೋ ತಂದೆತಾಯಿಗಳು ತಮ್ಮ ಮಗುವಿಗೆ ಕನ್ನಡ ಓದಲು ಬರುವುದಿಲ್ಲವೆಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುವುದನ್ನು ನೀವು ಗಮನಿಸಿರಬಹುದು!

ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳಿಗೆ ನಾವು ಅನೇಕಬಾರಿ ಹೋಗಿದ್ದರೂ ಅರಬ್‌ರಾಷ್ಟ್ರಗಳಿಗೆ ಪ್ರಯಾಣಿಸಿದ್ದು ಇದೇ ಮೊದಲ ಬಾರಿ. ಸುತ್ತೂರುಶ್ರೀಗಳ ಆತ್ಮೀಯ ಆಹ್ವಾನ. ಅವರು ದುಬೈನಲ್ಲಿ ಸ್ಥಾಪಿಸಿರುವ ಜೆ.ಎಸ್.ಎಸ್ ಅಂತಾರಾಷ್ಟ್ರೀಯ ಶಾಲೆಯ ಉದ್ಘಾಟನೆ; ಮಾಜಿರಾಷ್ಟ್ರಪತಿ ಅಬ್ದುಲ್ ಕಲಾಂರವರಿಂದ. ಕಳೆದ ಮೂರು ದಶಕಗಳಲ್ಲಿ ಲೆಕ್ಕವಿಲ್ಲದಷ್ಟು ವಿಮಾನಗಳನ್ನು ಹತ್ತಿ ಇಳಿದಿದ್ದರೂ ಆ ಲೋಹದ ಹಕ್ಕಿಯು ಕಾಂಗರೂವಿನಂತೆ ನೂರಾರು ಪ್ರಯಾಣಿಕರನ್ನು ಮತ್ತು ಅವರ ಸಾಮಾನು ಸರಂಜಾಮುಗಳನ್ನು ತನ್ನ ಒಡಲೊಳಗೆ ಇಟ್ಟುಕೊಂಡು ಭೋರ್ಗರೆಯುತ್ತಾ ಆಕಾಶಕ್ಕೆ ಜಿಗಿಯುವ ಆ ದೃಶ್ಯ ಈಗಲೂ ನಮಗೆ ವಿಸ್ಮಯಕಾರಿ! ಒಲಂಪಿಕ್ಸ್‌ಕ್ರೀಡಾಮೈದಾನದಲ್ಲಿ ಲಾಂಗ್‌ಜಂಪ್ ಮಾಡುವ ಕ್ರೀಡಾಪಟುವಿನಂತೆ ವಿಮಾನವು ರನ್‌ವೇನಲ್ಲಿ ಓಡುತ್ತಾ ಓಡುತ್ತಾ ಗಾಳಿಯಲ್ಲಿ ತೇಲಿ ಒಮ್ಮೆಲೇ ಮೇಲಕ್ಕೆ ಜಿಗಿದು ಮೋಡಗಳನ್ನು ಭೇದಿಸಿ ಸಾವಿರಾರು ಅಡಿ ಎತ್ತರದಲ್ಲಿ ಒಂದೇ ನೆಗೆತಕ್ಕೆ ಒಂದು ನಗರದಿಂದ ಮತ್ತೊಂದು ನಗರಕ್ಕೆ ಪ್ರಯಾಣಿಕರನ್ನು ತಲುಪಿಸುವ ವಿಜ್ಞಾನಿಗಳ ಸಾಧನೆ ಅತ್ಯದ್ಭುತ! ದೊಡ್ಡ ದೊಡ್ಡ ವಿಮಾನಗಳಲ್ಲಿ ಪಯಣಿಸುವಾಗ ಸಹಪ್ರಯಾಣಿಕರೆಲ್ಲರೂ ಕಾಣಿಸುತ್ತಾರೆ. ಆದರೆ ಮುಂದೆ ಕಾಕ್‌ಪಿಟ್‌ನಲ್ಲಿರುವ ಪೈಲಟ್ ಮಾತ್ರ ಕಾಣಿಸುವುದಿಲ್ಲ. ಇತ್ತೀಚೆಗೆ ಭಯೋತ್ಪಾದಕರ ಧಾಳಿಯಿಂದಾಗಿ ಸುರಕ್ಷಾದೃಷ್ಟಿಯಿಂದ ಕಾಕ್‌ಪಿಟ್ ಬಾಗಿಲು ಹಾಕಿ ಲಾಕ್ ಮಾಡಿರುತ್ತಾರೆ. ಗಗನಸಖಿಯು ಮುಂದೆ ಬಂದು ವಿಮಾನಯಾನದ ಸುರಕ್ಷಾಕ್ರಮಗಳನ್ನು ವಿವರಿಸುತ್ತಾಳೆ. ವಿಮಾನ ಬಹಳ ಎತ್ತರದಲ್ಲಿ ಹಾರುವಾಗ ಒಮ್ಮೊಮ್ಮೆ cabin pressure ಕಡಿಮೆಯಾಗುವುದರಿಂದ 'ಆಮ್ಲಜನಕ'ದ ಕೊರತೆಯುಂಟಾಗಿ ಉಸಿರಾಟದ ತೊಂದರೆಯಾಗಬಹುದು. ಆಗ ಇದ್ದಕ್ಕಿದ್ದಂತೆ ಮೇಲ್ಭಾವಣಿಯಿಂದ "oxygen mask" ಕೆಳಗೆ ಬೀಳುವುದೆಂದೂ ಅದನ್ನು ಮೂಗಿಗೆ ತೊಡಿಸಿಕೊಂಡು ಉಸಿರಾಡಬೇಕೆಂದು ಗಗನಸಖಿ ಪ್ರದರ್ಶನ ಮಾಡಿ ತೋರಿಸುತ್ತಾಳೆ. ಜೊತೆಯಲ್ಲಿ ಮಗುವೇನಾದರೂ ಇದ್ದರೆ ತಾಯಂದಿರು ಮೊದಲು ತಮ್ಮ ಮೂಗಿಗೆ 'ಮಾಸ್ಕ್' ಹಾಕಿಕೊಂಡ ನಂತರವೇ ಮಗುವಿನ ಮೂಗಿಗೆ ತೊಡಿಸಬೇಕೆಂದು ಕಿವಿಮಾತು ಹೇಳುತ್ತಾಳೆ. ಹೀಗೆ ಗಗನಸಖಿಯರು ಇನ್ನೂ ಅನೇಕ ಸುರಕ್ಷಾಸಂಬಂಧಿ ಸೂಚನೆಗಳನ್ನು ಕೊಡುವಾಗಲೆಲ್ಲಾ ನಮಗೆ ನೆನಪಾಗುವುದು ವೈರಾಗ್ಯನಿಧಿ ಅಕ್ಕಮಹಾದೇವಿಯ ಈ ಮುಂದಿನ ವಚನ:

**ಕೋಲತುದಿಯ ಕೋಡಗನಂತೆ**
**ನೇಣ ತುದಿಯ ಬೊಂಬೆಯಂತೆ**
**ಆಡುವೆನಯ್ಯಾ ಆಡುವೆನು**
**ನೀನಾಡಿಸಿದಂತೆ ಆಡುವೆನು!...**
**ಆನು ಇದ್ದೆನಯ್ಯಾ ನೀನು ಇರಿಸಿದಂತೆ**
**ಜಗದ ಯಂತ್ರವಾಯಕ ಚೆನ್ನಮಲ್ಲಿಕಾರ್ಜುನ ಸಾಕೆಂಬನ್ನಕ್ಕ!**

ಹಳ್ಳಿಗಳಿಗೆ ಬರುವ ದೊಂಬರು ಕೈಯಲ್ಲಿರುವ ಕೋಲಿನ ತುದಿಯ ಹಗ್ಗವನ್ನು ಕೋತಿಯ ಕೊರಳಿಗೆ ಕಟ್ಟಿ ಜನರ ಮುಂದೆ ಲಾಗ ಹೊಡೆಸುತ್ತಾರೆ. ಅವನು ಹೇಗೆ ಕೋಲನ್ನು ಅಲ್ಲಾಡಿಸುತ್ತಾನೋ ಹಾಗೆ ಕೋತಿ ಕುಣಿಯುತ್ತದೆ. ಇದೇ ರೀತಿ ಪ್ರಾಚೀನಕಾಲದಲ್ಲಿ ಹಳ್ಳಿಗಳಲ್ಲಿ ಪ್ರಚಲಿವಾಗಿದ್ದ 'ಬೊಂಬೆಯಾಟ' ಆಧುನಿಕ ಕಾಲದ ಮಕ್ಕಳ ಟಿವಿ ಕಾರ್ಟೂನ್ ಸೀರಿಯಲ್ ಇದ್ದಂತೆ! ಕಾಣದ ಹಾಗೆ ಹಿಂದೆ ಅವಿತುಕೊಂಡಿರುವ ಸೂತ್ರಧಾರ ತನ್ನ ಕೈಬೆರಳುಗಳಿಂದ ಆಡಿಸಿದಂತೆ ಬೊಂಬೆ ಬಿಳಿಯ ಪರದೆಯ ಮೇಲೆ ಕುಣಿಯುತ್ತದೆ. ಹಾಗೇನೆ ಈ ಜಗತ್ತಿನ ಸೂತ್ರಧಾರನಾದ ದೇವರು ಕಣ್ಣಿಗೆ ಕಾಣಿಸದಿದ್ದರೂ ಅವನು ಆಡಿಸಿದಂತೆ ಆಡಬೇಕಾಗುತ್ತದೆ. ವಿಮಾನಯಾನದಲ್ಲಿ ಗಗನಸಖಿಯರು ಮುನ್ಸೂಚನೆ ಕೊಡುವಂತೆ ಜೀವನವೆಂಬ ಯಾತ್ರೆಯಲ್ಲಿ ನಡೆಯುವಾಗ ಗುರುಹಿರಿಯರು ಮತ್ತು ಆತ್ಮೀಯರು ಬುದ್ಧಿಮಾತುಗಳನ್ನು ಹೇಳುತ್ತಾರೆ. ಹವಾಮಾನದ ವೈಪರೀತ್ಯ ಉಂಟಾದಾಗ ಕಣ್ಣಿಗೆ ಕಾಣದ ಪೈಲೆಟ್ ಕಾಕ್‌ಪಿಟ್‌ನಿಂದಲೇ ಧ್ವನಿವರ್ಧಕದ ಮೂಲಕ ಪ್ರಯಾಣಿಕರಿಗೆ ಸೀಟ್ ಬೆಲ್ಟ್ ಹಾಕಿಕೊಳ್ಳಲು ಸೂಚಿಸುತ್ತಾನೆ. ಅಥವಾ Emergency Landing ಆಗುವಾಗ Life Jacket ಧರಿಸಿ Emergency Exit ಮುಖಾಂತರ ಹೊರಗೆ ಜಿಗಿಯಲು ಸೂಚನೆ ಕೊಡುತ್ತಾನೆ. ಅವನ ಸೂಚನೆಯನ್ನು ನೀವು ಸರಿಯಾಗಿ ಕೇಳಿಸಿಕೊಳ್ಳದೆ ಉದಾಸೀನ ಮಾಡಿದರೆ ಅದಕ್ಕೆ ಪೈಲೆಟ್ ಆಗಲೀ, ಗಗನಸಖಿಯರಾಗಲೀ ಹೊಣೆಗಾರರಲ್ಲ. ಆಗಬಹುದಾದ ಅನಾಹುತಕ್ಕೆ ನೀವೇ ಜವಾಬ್ದಾರರು. ಹಾಗೇನೇ ನಿಮ್ಮ

ಬದುಕಿನ ಪಯಣದಲ್ಲಿ ವೈಪರೀತ್ಯಗಳು ಉಂಟಾದಾಗ ಸಮಾಧಾನಚಿತ್ತರಾಗಿ ನಿಮ್ಮ ಒಳದನಿಯನ್ನು ಕಿವಿಗೊಟ್ಟು ಸರಿಯಾಗಿ ಆಲಿಸದಿದ್ದರೆ ಅಥವಾ ನಿಮ್ಮ ನಿಜವಾದ ಹಿತೈಷಿಗಳ ಹಿತನುಡಿಯನ್ನು ಕೇಳದಿದ್ದರೆ ಮುಂದೆ ನಿಮ್ಮ ಜೀವನದಲ್ಲಿ ಆಗುವ ಅನಾಹುತಕ್ಕೆ ನೀವೇ ಜವಾಬ್ದಾರರಾಗಬೇಕಾಗುತ್ತದೆ. ಭಾವೋದ್ವೇಗದಲ್ಲಿ ನೀವು ನೀವಾಗಿರುವುದಿಲ್ಲ. ರಾಗದ್ವೇಷಗಳಿಂದ ಕೂಡಿದ ಮನಸ್ಸಿಗೆ ಸತ್ಯವೇನೆಂಬುದು ಗೋಚರಿಸುವುದಿಲ್ಲ. ನಿಮ್ಮ ತಪ್ಪು ಹೆಜ್ಜೆಗಳಿಂದ ಸಂಭವಿಸುವ ದುರಂತಕ್ಕೆ ನಿಮ್ಮ 'ಹಣೆಬರಹ'ವನ್ನು ಹಳಿಯುವುದು ಸರಿಯಲ್ಲ. ಹಣೆಬರಹವೆಂದರೆ ನೀವು ಸರಿಯಾದ ದಾರಿಯಲ್ಲಿ ನಡೆದರೂ ನಿಮ್ಮ ಕೈಮೀರಿ ನಡೆಯುವ ಘಟನೆ. ನಿಮ್ಮ ಧರ್ಮಬಾಹಿರ ನಡವಳಿಕೆಯಿಂದ, ಅಜ್ಞಾನದಿಂದ ಅಥವಾ ದುರಹಂಕಾರದಿಂದ ನಿಮ್ಮ ಕಾಲ ಮೇಲೆ ನೀವೇ ಕಲ್ಲುಚಪ್ಪಡಿ ಎತ್ತಿಹಾಕಿಕೊಂಡರೆ ಅದು 'ಹಣೆಬರಹ'ವಾಗುವುದಿಲ್ಲ.

ಅನೇಕವೇಳೆ ನೀವು ಧರ್ಮಬದ್ಧವಾಗಿಯೇ ನಡೆದುಕೊಂಡರೂ ಮತಧರ್ಮಗಳ ಚೌಕಟ್ಟನ್ನು ಮೀರಿ ನಡೆದುಕೊಂಡಾಗ ಸಮಾಜದ ಆಕ್ರೋಶಕ್ಕೆ ಗುರಿಯಾಗುವುದನ್ನು ಕಾಣಬಹುದಾಗಿದೆ. ದುಬೈಗೆ ಬಂದ ಮೇಲೆ ಕೆಲವಾರು ಯುವದಂಪತಿಗಳು ನಮ್ಮನ್ನು ಭೇಟಿಯಾದರು. ಅವರಲ್ಲಿ ಕೆಲವರು ನಮಗೆ ಮೊದಲೇ ಗೊತ್ತಿದ್ದವರು. ಇನ್ನು ಕೆಲವರು ಇಲ್ಲಿಗೆ ಬಂದಮೇಲೆ ಪರಿಚಯವಾದವರು. ಈ ಮುಂದೆ ಪ್ರಸ್ತಾಪಿಸುವ ಸಮಸ್ಯೆ ಕೇವಲ ದುಬೈಗೆ ಸೀಮಿತವಾದುದಲ್ಲ. ಆಧುನಿಕ ವಿದ್ಯಾವಂತ ಯುವ ಪೀಳಿಗೆ ಭಾರತದ ಒಳ-ಹೊರಗೆ ಎಲ್ಲೆಡೆ ಎದುರಿಸುತ್ತಿರುವ ವೈವಾಹಿಕ ಸಮಸ್ಯೆ. ಅವರು ಪ್ರೀತಿಸಿದ ಹುಡುಗ ಹುಡುಗಿಯರನ್ನು ಮದುವೆಯಾಗಲು ಅಡ್ಡಿಬರುವ ಸಾಮಾಜಿಕ ಕಟ್ಟುಪಾಡು. ಅವರು ಮತ್ತು ಅವರ ತಂದೆ-ತಾಯಿಗಳು ಸಂತೋಷವಾಗಿದ್ದರೂ ಸಮಾಜ ಅವರನ್ನು ಸಂತೋಷವಾಗಿರಲು ಬಿಡುತ್ತಿಲ್ಲ. ಪ್ರಾತಿನಿಧಿಕವಾಗಿ ಇಲ್ಲಿ ಎರಡು ಯುವದಂಪತಿಗಳ ಕೌಟುಂಬಿಕ ಜೀವನವನ್ನು ಪರಿಶೀಲಿಸಬಹುದು. ಒಬ್ಬ ಲಿಂಗಾಯತರ ಹುಡುಗಿ ಮಾಧ್ವಬ್ರಾಹ್ಮಣನನ್ನು ಮದುವೆಯಾಗಿದ್ದಾಳೆ. ಮತ್ತೊಬ್ಬ ಮಾಧ್ವಬ್ರಾಹ್ಮಣ ಹುಡುಗ ಮುಸ್ಲಿಂ ಹುಡುಗಿಯನ್ನು ಮದುವೆಯಾಗಿದ್ದಾನೆ. ಇಬ್ಬರಿಗೂ ಮಕ್ಕಳಾಗಿವೆ. ಅವರ ಒಡಹುಟ್ಟಿದವರು ಸ್ವಜಾತಿಯಲ್ಲಿಯೇ ಮದುವೆಯಾಗಿದ್ದರೂ ಅಷ್ಟು ಚೆನ್ನಾಗಿಲ್ಲ. ಆದರೆ ಇವರು ಮಾತ್ರ ಅನ್ಯೋನ್ಯವಾಗಿ ಸುಖ-ಸಂತೋಷಗಳಿಂದ ಸಂಸಾರಮಾಡಿಕೊಂಡಿದ್ದಾರೆ. ಸಮಾಜದ ದೃಷ್ಟಿಯಿಂದ ಇವರು ಮಾಡಿದ ಒಂದೇ ಒಂದು 'ತಪ್ಪು' ಎಂದರೆ ಬೇರೆ ಜಾತಿಯಲ್ಲಿ ಮದುವೆಯಾಗಿದ್ದು. ಅಳಿಯನ ವಿಚಾರವಾಗಿ ತಂದೆತಾಯಿಗಳಿಗೂ, ಸೊಸೆಯ ವಿಚಾರವಾಗಿ ಅತ್ತೆಮಾವಂದಿರಿಗೂ ವಿಭಿನ್ನ ಜಾತಿಯವರಾದರೂ ತುಂಬಾ ಸಂತೋಷ-ಸಮಾಧಾನ ಇದೆ. ಸೊಸೆಯ ಸದ್ಗುಣಗಳನ್ನು ಕಂಡು ಬಂಧುಗಳೂ ಮಾರುಹೋಗಿದ್ದಾರೆ. ಹೀಗಿದ್ದರೂ 'ನಮ್ಮ ಜಾತಿಯಲ್ಲಿ ಏಕಮ್ಮಾ ನೀನು ಹುಟ್ಟಲಿಲ್ಲಾ!' ಎಂದು ಉದ್ಗರಿಸುವಂತೆ ಸಮಾಜ ಏಕೆ ಅವರನ್ನು ಪೀಡಿಸುತ್ತಿದೆ? 'ನಮ್ಮ ಮಕ್ಕಳು ಸಂಧ್ಯಾವಂದನೆ ಮಾಡಬೇಕೋ, ಲಿಂಗಪೂಜೆ ಮಾಡಬೇಕೋ, ನಮಾಜು ಮಾಡಬೇಕೋ? ನಮ್ಮ ಪಾಡಿಗೆ ನಾವಿರಲು ಸಮಾಜ ನಮ್ಮನ್ನು ಏಕೆ ಬಿಡುತ್ತಿಲ್ಲ?' ಎಂಬ ಅವರ ಪ್ರಶ್ನೆಗೆ ನಿಮ್ಮ ಉತ್ತರವೇನು? 'ವಸುಧೈವ ಕುಟುಂಬಕಮ್', 'ಸರ್ವೇ ಜನಾಃ ಸುಖಿನೋ ಭವಂತು...ಮಾ ಕಶ್ಚಿದ್ ದುಃಖಭಾಗ್ ಭವೇತ್' ಅಂದರೆ 'ಇಡೀ ವಿಶ್ವವೇ ಒಂದು ಕುಟುಂಬ, ಎಲ್ಲರೂ ಸುಖವಾಗಿರಲಿ, ಯಾರೂ ದುಃಖಿಗಳಾಗುವುದು ಬೇಡ' ಎಂಬ ಆದರ್ಶವನ್ನು ಜಗತ್ತಿಗೆ ಬೋಧಿಸುವ ನಾವೇ ನಮ್ಮೊಳಗೆ ಅನೇಕ ಬೇಲಿಗಳನ್ನು ಹಾಕಿಕೊಂಡಿದ್ದೇವೆಂದು ನಿಮಗೆ ಅನ್ನಿಸುವುದಿಲ್ಲವೇ?

1.4.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑